ಶ್ರೀಕಂಠನು ಮರದ ಕೆಳಗೆ ನಿಂತಾಗ ಅಲ್ಲಿಯವರೆಗೆ ನಡೆದ ಹಳೆಯ ಘಟನೆಗಳೆಲ್ಲಾ ಕಣ್ಣಮುಂದೆ ಹಾದು ಹೋದವು. ಬೆಂಗಳೂರಿಗೆ ಬಂದಾಗಿನಿಂದ ಶ್ರೀಕಂಠನು ಹಳ್ಳಿಯನ್ನು ಬಿಟ್ಟರೂ, ಹಳ್ಳಿಯ ನೆನಪು ಅವನನ್ನು ಬಿಟ್ಟರಲಿಲ್ಲ. ವ್ಯಾಪಾರದ ಮಧ್ಯದಲ್ಲೋ, ಮಳೆ ಸುರಿಯುವಾಗ ಎಲ್ಲೋ ಮರದಡಿಯಲ್ಲಿ ನಿಂತಾಗಲೋ, ಬೆಂಗಳೂರಿನ ಮಾರಮ್ಮನ ಹಬ್ಬದ ಜಾತ್ರೆಯಲ್ಲಿ ತಾನೊಬ್ಬನೇ ಓಡಾಡುವಾಗಲೋ, ತಟ್ಟನೆ ತನ್ನ ಊರಿನಲ್ಲಿ ಆದ ಘಟನೆಗಳು ಸೀರಿಯಲ್‌ನಂತೆ ಒಂದು ಕ್ಷಣ ಕಣ್ಣಮುಂದೆ ಹಾದುಹೋಗುತ್ತಿದ್ದವು. ತನ್ನಿಂದ ತನ್ನ ಹೆಂಡತಿ ಮಗಳೂ ಕಷ್ಟಪಡಬೇಕಾಯಿತಲ್ಲ ಎಂದು ಎಷ್ಟೋ ಬಾರಿ ಮರುಗುತ್ತಿದ್ದ. ಇವೆಲ್ಲಾ ಬಿಟ್ಟು ತಾನು ಮತ್ತೆ ಹಳ್ಳಿಗೆ ವಾಪಸ್ ಹೋಗಿ, ಅಣ್ಣನ ಹತ್ತಿರ ಕ್ಷಮೆ ಕೇಳಿ, ಅಲ್ಲೇ ಮತ್ತೆ ನೆಮ್ಮದಿಯಾಗಿ ಜೀವನ ಸಾಗಿಸಲೇ? ಎಂಬ ಆಲೋಚನೆಗಳೂ ಕೂಡ ಬರುತ್ತಿದ್ದವು. ಆದರೆ, ಅವನ ಅಹಂಕಾರ ಹಾಗೇ ಮಾಡುವುದರಿಂದ ಅತನನ್ನು ತಡೆಯುತ್ತಿತ್ತು.



ಮಳೆ ನಿಂತಿತು. ಹಣ್ಣಿನ ಗಾಡಿಯನ್ನು ತಳ್ಳುತ್ತಾ ಶ್ರೀಕಂಠನು ಭಾರವಾದ ಹೆಜ್ಜೆಗಳನ್ನಿಡುತ್ತಾ ತನ್ನ ವಠಾರದ ಕಡೆ ಬಂದ. ಮನೆಯ ಹೊರಗಡೆ ಇದ್ದ ಎರಡು ಜೊತೆ ಚಪ್ಪಲಿಗಳನ್ನು ನೋಡಿ, ಆಶ್ಚರ್ಯಚಕಿತನಾಗಿ, ಅವು ತನಗೆ ತೀರ ಪರಿಚಿತರ ಚಪ್ಪಲಿಯಲ್ಲವೇ ಎಂದು ದಿಟ್ಟಿಸಿ ನೋಡುತ್ತಿದ್ದಂತೆಯೇ, ತಕ್ಷಣ ಅದು ಅಣ್ಣ ಮತ್ತು ಸಹನಾಳದ್ದು ಎಂದು ಮನಸ್ಸಿಗೆ ಹೊಳೆದ ತಕ್ಷಣ ಶ್ರೀಕಂಠನ ಮನಸ್ಸು ಸಂತೋಷದಿಂದ ಕುಣಿದಾಡತೊಡಗಿತು. ಆದರೆ, ಅತಿಯಾದ ಉತ್ಸಾಹವನ್ನು ತೋರಿಸಿಕೊಳ್ಳದೆ, ಬಾಗಿಲನ್ನು ತೆರೆದ. ತಾನೆಣಿಸಿದಂತೆ ಒಳಗೆ ಚಾಪೆಯ ಮೇಲೆ ಅಣ್ಣ ಕುಳಿತಿದ್ದರೆ, ಆತನ ತೊಡೆಯ ಮೇಲೆ ಸಹನಾ ಮತ್ತು ಗೌರಿ ಕುಳಿತಿದ್ದರು. ಗೌರಿಯು ರೂಬಿಕ್ಸ್ ಕ್ಯೂಬ್‌ನ್ನು ತಿರುಗಿಸುತ್ತಾ, ಖುಷಿಯಿಂದ ಕುಳಿತಿದ್ದಳು. ಅದನ್ನು ನೋಡಿದಾಕ್ಷಣ ಶ್ರೀಕಂಠನಿಗೆ ಪಿತ್ತ ನೆತ್ತಿಗೇರಿತು. ಮನೆಯನ್ನು ಒಡೆದ ಆ ಆಟಿಕೆಯನ್ನು ಸಹನಾ ಮತ್ತೆ ಇಲ್ಲಿಗೇಕೆ ತಂದಳು ಎಂದು ಕೋಪಗೊಂಡ ಶ್ರೀಕಂಠ, "ಅದನ್ನು ಮುಟ್ಟ ಬ್ಯಾಡ ಕಣವ್ವ" ಎಂದು ಮಗಳಿಗೆ ಹೇಳಿದ. ಆಗ ನಂಜುಂಡನು ಅದು ಸಹನಾಳ ಕೈಗೆ ಬಸವಣ್ಣೆಪ್ಪನವರ ಮೊಮ್ಮಗನ ಕೈಯಿಂದ ಹೇಗೆ ಬಂತು ಎಂಬ ವಿಷಯವನ್ನೆಲ್ಲಾ ತಿಳಿಸಿದ. ನಂಜುಂಡನು ಶ್ರೀಕಂಠನಿಗೆ ಅವನು ಹಳ್ಳಿ ಬಿಟ್ಟು ಬಂದಾಗಿನಿಂದ ನಡೆದ ಘಟನೆಗಳನ್ನೆಲ್ಲಾ ವಿವರಿಸತೊಡಗಿದ. ಈ ಆಟಿಕೆಯ ಜಗಳದಿಂದಾಗಿಯೇ ಗೌರಿಯು ಮನೆಬಿಟ್ಟು ಹೋದಳೆಂದು ತಿಳಿದಿದ್ದ ಸಹನಾ ಬಹಳ ನೊಂದುಕೊಂಡಿದ್ದಳು. ಆ ಆಟದ ಸಾಮಾನು ತನಗೆ ಬೇಡ, ಗೌರಿಯು ಮನೆಗೆ ಬರುತ್ತಿದ್ದಂತೆ ಅವಳಿಗೇ ಅದನ್ನು ಕೊಡುವುದಾಗಿ, ಅವಳನ್ನು ಮನೆಗೆ ಕರೆತರುವಂತೆ ಹಟ ಹಿಡಿದಿದ್ದಳು. ನಿದ್ದೆಯಲ್ಲೂ ಗೌರಿಯನ್ನು ನೆನೆಸಿಕೊಂಡು ಅಳುವುದು ಮಾಡುತ್ತಿದ್ದಳು. ಅದಕ್ಕಾಗಿ ತಾನು ಅವರಿವರನ್ನು ಕೇಳಿ, ಹೇಗೋ ನಿನ್ನ ವಿಳಾಸವನ್ನು ಪತ್ತೆಹಚ್ಚಿದೆನೆಂದು ನಂಜುಂಡನು ಹೇಳಿದ.

ಮನೆಯಲ್ಲಿ ಅಡುಗೆಯ ತಯಾರಿ ನಡೆದಿದ್ದರೆ, ಅಣ್ಣ-ತಮ್ಮ ಹೊರಗೆ ಸುತ್ತಾಡಿಕೊಂಡು ಬರಲು ಹೊರಟರು. ಸಹನಾ ಮತ್ತು ಗೌರಿ ಅತ್ಯಂತ ಆಸಕ್ತಿಯಿಂದ ರೂಬಿಕ್ಸ್ ಕ್ಯೂಬ್ ಜೋಡಿಸುವುದರಲ್ಲಿ ಮಗ್ನರಾಗಿರುವುದನ್ನು ನೋಡಿದ ಶ್ರೀಕಂಠನಿಗೆ, ಹಿಂದೊಮ್ಮೆ ಜೋಡಿಸಿದ್ದ ರೂಬಿಕ್ಸ್ ಕ್ಯೂಬನ್ನು ತಾನು ಕಿತ್ತು ನೆಲಕ್ಕೆ ಎಸೆದಿದ್ದು ನೆನಪಾಯಿತು. ಈಗ ಅವರಿಬ್ಬರೂ ಅದನ್ನು ಜೋಡಿಸಲು ಪ್ರಯತ್ನಿಸುತ್ತಿದ್ದಾರೆ, ತಾನು ಅದನ್ನು ಕೆಡಿಸಲು ಯತ್ನಿಸಬಾರದು ಎನಿಸಿತು.

ಮಳೆ ಬಂದು ನಿಂತಿತ್ತು. ಮಳೆ ಬಂದಿದ್ದಕ್ಕೋ ಏನೋ ಈ ಬಡಾವಣೆ ಬೇಗನೆ ನಿರ್ಜನವಾಗಿತ್ತು. ರಸ್ತೆಯ ಬದಿಯಲ್ಲಿ ಸಾಲುದ್ದಕ್ಕೂ ಬೆಳೆದಿದ್ದ ಗುಲ್‌ಮೊಹರ್ ಮರಗಳೂ, ಅವುಗಳ ಮಧ್ಯೆಯಿಂದ ತೂರಿಬರುತ್ತಿದ್ದ ಮರ್ಕ್ಯುರಿ ದೀಪದ ಕಿರಣಗಳೂ, ಬೀಸುವ ಗಾಳಿಗೆ ತೊನೆದಾಡುತ್ತಿದ್ದ ಮರಗಳಿಂದ ಬೀಳುತ್ತಿದ್ದ ಮಳೆಯ ಹನಿಗಳು ಆಹ್ಲಾದಕರ ವಾತಾವರಣವನ್ನು ಉಂಟುಮಾಡಿದ್ದವು. ಒಂದೆರಡು ಗಂಟೆಯ ಹಿಂದೆ ದುಃಖಭರಿತವಾಗಿದ್ದ ಶ್ರೀಕಂಠನ ಮನಸ್ಸು, ಅಣ್ಣನ ಆಗಮನದಿಂದ ಉಲ್ಲಾಸಗೊಂಡಿತ್ತು. ಊರಿನಲ್ಲಿ ಜೊತೆಯಲ್ಲಿದ್ದಾಗ ಅರ್ಥವಾಗದ ಅಣ್ಣನ